

## ಒಡಕಲು ಬಿಂಬಗಳು

ಹೊಸ ತಲೆಮಾರಿನ ಓದುಗ ಸಮೂಹವೊಂದು ಸಾಹಿತಿಗಳನ್ನು ಪ್ರಶ್ನಿಸುತ್ತ, ಅವರ ಸಾಹಿತ್ಯವನ್ನು ನಿರಾಕರಿಸುವ ಪ್ರವೃತ್ತಿ ಸಾಹಿತ್ಯದ ಹೆಸರಿನಲ್ಲಿ ನಡೆಯುತ್ತಿರಬಹುದಾದ ಗುಂಪುಗಾರಿಕೆಯನ್ನು ಸೂಚಿಸುವಂತಿದೆ. ''ಕನ್ನಡದ ಎಲ್ಲ ಪ್ರಮುಖ ಪುಸ್ತಕಗಳು ಒಂದೇ ಮಳಿಗೆಯಲ್ಲಿ ಸಿಗುವುದಿಲ್ಲ. ಕೆಲವು ಪುಸ್ತಕಗಳನ್ನು ಓದಬೇಕೆನ್ನಿಸುತ್ತದೆ. ಆದರೆ ಅವು ಎಲ್ಲಿ ಸಿಗುತ್ತವೋ ಗೊತ್ತಿಲ್ಲ'' ಎಂದು ಕಥೆಗಾರ ಗುರುಪ್ರಸಾದ್ ಕಾಗಿನೆಲೆ ಸಂದರ್ಶನವೊಂದರಲ್ಲಿ ಹೇಳಿದ್ದರು. ಲೇಖಕರ ನಡುವಣ ವೈಚಾರಿಕ ಭಿನ್ನಮತ ಪುಸ್ತಕದ ಮಾರಾಟದಲ್ಲಿ ಮಾತ್ರವಲ್ಲದೆ, ಓದುಗರ ನಡುವೆ ಕೂಡ ರೂಪುಗೊಂಡಿರುವುದನ್ನು ಕಾಗಿನೆಲೆ ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದರು. ನಾವು ಇಂತಹದ್ದನ್ನಷ್ಟೆ ಓದುತ್ತೇವೆ ಎನ್ನುವುದು ಅಥವಾ ನಮಗೆ ಮತ್ತೊಂದು ವಿಚಾರಧಾರೆಯ ಓದುಗರು ಬೇಡ ಎನ್ನುವ ಧೋರಣೆಗಳು ಸಾಹಿತ್ಯದ ಹಿತಾಸಕ್ತಿಯ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಸಮಾಜದಲ್ಲಿನ ಒಡಕು, ಅಸಹನೆ ಸಾಹಿತ್ಯದಲ್ಲೂ ಪ್ರತಿಫಲಿಸುತ್ತಿರುವಂತೆ ಕಾಣಿಸುತ್ತದೆ.

ಮೈಸೂರಿನ 'ಅಭಿರುಚಿ' ಪ್ರಕಾಶನ ಸಂಸ್ಥೆಯ ಗಣೇಶ್ ಕೂಡ ಪುಸ್ತಕಗಳ ಮಾರಾಟಕ್ಕೆ ಹೊಸ ತಾಂತ್ರಿಕ ಸಲಕರಣೆಗಳು ಕ್ರಾಂತಿಕಾರಕ ಬದಲಾವಣೆ ತಂದಿವೆ ಎನ್ನುವುದನ್ನು ಒಪ್ಪುವುದಿಲ್ಲ. ''ಟೀವಿ ಕಾರಣದಿಂದಾಗಿ ಕಡಿಮೆಯಾದ ಓದುವ ಸಂಸ್ಕೃತಿ, ಸೋಷಿಯಲ್ ಮೀಡಿಯಾ ಕಾರಣದಿಂದಾಗಿ ಇನ್ನಷ್ಟು ಕಳಾಹೀನವಾಯಿತು'' ಎನ್ನುವುದು ಅವರ ಅನಿಸಿಕೆ. ಪುಸ್ತಕಗಳ ಫೋಟೊ ಕಾಪಿಗಳು ವಾಟ್ಸ್‌ಆ್ಯಪ್ ಮೂಲಕ ವಿನಿಮಯವಾಗುವುದನ್ನು ಉದಾಹರಿಸುವ ಅವರು, ಸೋಷಿಯಲ್ ಮೀಡಿಯಾದಲ್ಲಿ ಕಾಪಿರೈಟ್ ಕಿಮ್ಮತ್ತು ಕಳೆದುಕೊಂಡಿರುವುದನ್ನೂ 'ಬರೆದು ಬದುಕುವವರು' ಕಡಿಮೆಯಾಗಿರುವುದನ್ನೂ ಗುರ್ತಿಸುತ್ತಾರೆ.

ಎಂಜಿನಿಯರಿಂಗ್, ವಾಣಿಜ್ಯ ಸೇರಿದಂತೆ ವಿವಿಧ ಕ್ಷೇತ್ರಗಳ ಯುವಜನರು ಓದುವಿಕೆಗೆ ಗಮನಾರ್ಹ ಸಂಖ್ಯೆಯಲ್ಲಿ ತೆರೆದುಕೊಳ್ಳುತ್ತಿರುವುದರಿಂದ ಹೊಸ ಓದುಗ ವಲಯವೊಂದು ಸೃಷ್ಟಿಯಾಗಿರುವುದನ್ನು ಗಣೇಶ್ ಗಮನಿಸಿದ್ದಾರೆ. ಪೂರ್ಣಚಂದ್ರ ತೇಜಸ್ವಿಯವರ ಕ್ಲಾಸಿಕ್‌ಗಳನ್ನು ಯುವಜನತೆ ಇಷ್ಟಪಟ್ಟು ಆಸ್ವಾದಿಸುತ್ತಾರೆ ಎನ್ನುವ ಅವರು – ಪ್ರಬಂಧ, ಪ್ರವಾಸ ಕಥನದಂತಹ ಪ್ರಕಾರಗಳು ಕಳಾಹೀನವಾಗಿರುವುದು ಕೂಡ ಪುಸ್ತಕ ಸಂಸ್ಕೃತಿ ಮಂಕಾಗಲಿಕ್ಕೆ ಕಾರಣಗಳಲ್ಲೊಂದು ಎನ್ನುತ್ತಾರೆ.

''ಸಾಹಿತ್ಯಿಕ ಕಾರ್ಯಕ್ರಮಗಳ ಪ್ರಚಾರಕ್ಕೆ ವಾಟ್ಸ್‌ಆ್ಯಪ್ ಅನುಕೂಲಕರವಾಗಿದೆ. ಆದರೆ, ಹೆಚ್ಚಿನ ಕಾರ್ಯಕ್ರಮಗಳಲ್ಲಿ ಹಿರಿಯ ನಾಗರಿಕರಷ್ಟೆ ಕಾಣಿಸುತ್ತಾರೆ'' ಎನ್ನುವ ಸುಬ್ರಹ್ಮಣ್ಯರ ಮಾತಿನಲ್ಲಿ ಸಮಸ್ಯೆಯ ಮತ್ತೊಂದು ಮುಖ ಕಾಣಿಸುತ್ತದೆ. ''ಮುದ್ರಕರನ್ನು ಮಾತನಾಡಿಸಿ ನೋಡಿ: ಸಾವಿರ ಪ್ರತಿಗಳು ಮುದ್ರಣವಾಗುತ್ತಿದ್ದ ಜಾಗದಲ್ಲಿ ಈಗ ಐನೂರು ಪ್ರತಿಗಳು ಮುದ್ರಣಗೊಳ್ಳುತ್ತಿವೆ'' ಎನ್ನುತ್ತಾರೆ.

''ಒಳ್ಳೆಯ ಓದುಗರನ್ನು ರೂಪಿಸುವುದು ಇವತ್ತಿನ ಜರೂರು. ಅದನ್ನು ರೂಪಿಸುವುದು ಸಮಾಜದ ಕೆಲಸ. ಭೈರಪ್ಪ, ತ್ರಿವೇಣಿ, ವಾಣಿ, ರವಿ ಬೆಳಗೆರೆಯಂಥ ಲೇಖಕರು ಓದುಗ ವರ್ಗವನ್ನು ಬೆಳೆಸಿದ್ದಾರೆ. ಇಂಥ ಲೇಖಕರ ಸಂಖ್ಯೆ ಹೆಚ್ಚಬೇಕು'' ಎನ್ನುವುದು ಗಣೇಶ್‌ರ ಕಾಳಜಿ. ಈ ಮಾತಿಗೆ ಪ್ರತಿಕ್ರಿಯೆ ರೂಪದಲ್ಲಿ – ''ಕನ್ನಡ ಶಾಲೆಗಳು ಮುಚ್ಚುತ್ತಿವೆ. ಕನ್ನಡ ಮೇಷ್ಟ್ರುಗಳು ಪುಸ್ತಕಗಳನ್ನೇ ಓದುತ್ತಿಲ್ಲ. ಹೀಗಿರುವಾಗ ಓದುಗರನ್ನು ಎಲ್ಲಿಂದ ತರುವುದು? ಹೊಸ ಓದುಗರನ್ನು ಹೇಗೆ ರೂಪಿಸುವುದು?'' ಎಂದು ಸುಬ್ರಹ್ಮಣ್ಯ ನಿರಾಶಾದಾಯಕ ಪರಿಸ್ಥಿತಿಯನ್ನೇ ಪ್ರಶ್ನೆಗಳನ್ನಾಗಿಸಿದಂತೆ ಕೇಳುತ್ತಾರೆ.

## ನಿರಾಶೆ ಮತ್ತು ಭರವಸೆ

ವೃತ್ತಿಪರ ಪ್ರಕಾಶಕರ ನಡುವೆ ಕಪಿಲ ಪಿ. ಹುಮನಾಬಾದೆ ಎನ್ನುವ



### ಸಾವಿರ ಪ್ರತಿ ಮಾರಾಟ ಕಷ್ಟವಲ್ಲ!

ಲೇಖಕನೊಬ್ಬ ತಾನೇ ಪ್ರಕಾಶಕನಾದರೆ ಪುಸ್ತಕ ಮಾರಾಟಕ್ಕೆ ಇರುವ ದಾರಿಗಳೇನು? 'ದಾರಿ ಹಲವಾರಿವೆ' ಎನ್ನುತ್ತಾರೆ ಲೇಖಕ ಹಾಗೂ ಪುಸ್ತಕ ಪ್ರಾಧಿಕಾರದ ಸದಸ್ಯ ದ್ವಾರನಕುಂಟೆ ಪಾತಣ್ಣ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸಗಟು ಖರೀದಿ ಯೋಜನೆಯಲ್ಲಿ ಆಯ್ಕೆಯಾದರೆ 300 ಪುಸ್ತಕಗಳು ಮಾರಾಟವಾಗುತ್ತವೆ. ಬೆಂಗಳೂರಿನಲ್ಲಿನ ಐದು ವಲಯ ಗ್ರಂಥಾಲಯಗಳಿಗೆ ಪುಸ್ತಕವೊಂದರ ತಲಾ 100 ಪ್ರತಿಗಳಂತೆ 500 ಪ್ರತಿಗಳನ್ನು ಮಾರಲಿಕ್ಕೆ ಅವಕಾಶವಿದೆ. ಕನ್ನಡ ಪುಸ್ತಕ ಪ್ರಾಧಿಕಾರದ ಖರೀದಿ ಯೋಜನೆಯಲ್ಲಿ 150 ಪುಸ್ತಕಗಳವರೆಗೆ ಕೊಳ್ಳಲಿಕ್ಕೆ ಅವಕಾಶವಿದೆ. ಉಳಿದಂತೆ ನವಕರ್ನಾಟಕ, ಅಂಕಿತದಂಥ ಪುಸ್ತಕ ಅಂಗಡಿಗಳು ಕೂಡ ಲೇಖಕರ ಪುಸ್ತಕಗಳ ಮಾರಾಟಕ್ಕೆ ವೇದಿಕೆಗಳಾಗಿವೆ. ಹೀಗಾಗಿ, ತಾಳ್ಮೆ ಹೊಂದಿದ್ದಲ್ಲಿ ಪುಸ್ತಕ ಮಾರಾಟ ಕಷ್ಟವೇನೂ ಅಲ್ಲ ಎನ್ನುತ್ತಾರೆ ಪಾತಣ್ಣ.

ಈವರೆಗೆ ಎಂಟು ಪುಸ್ತಕಗಳನ್ನು ಪ್ರಕಟಿಸಿರುವ ಪಾತಣ್ಣನವರು, ಒಂದು ಪುಸ್ತಕದಲ್ಲೂ ನಷ್ಟ ಅನುಭವಿಸಿಲ್ಲವಂತೆ. ಪುಸ್ತಕ ಪ್ರಕಟಣೆಯಲ್ಲಿ ಒಳ್ಳೆಯ ಲಾಭವಿದೆ ಎನ್ನುವುದು ಅವರ ಅನುಭವ. ಪ್ರಕಾಶಕರಿಂದ ಲೇಖಕರಿಗೆ 25 ಗೌರವಪ್ರತಿಗಳು ದೊರೆಯುತ್ತವೆ. ಇದರ ಬದಲಾಗಿ ನಾವೇ ಪುಸ್ತಕಗಳನ್ನು ಪ್ರಕಟಿಸಿದರೆ ಸ್ನೇಹಿತರಿಗೆ ಪುಸ್ತಕಗಳನ್ನು ಕೊಡಲು ಹಿಂದೆಮುಂದೆ ನೋಡುವ ಪ್ರಸಂಗವೂ ಇರುವುದಿಲ್ಲ ಎನ್ನುತ್ತಾರೆ.

ಪಾತಣ್ಣನವರ ಲೆಕ್ಕಾಚಾರವನ್ನು ನೋಡಿದರೆ ಓದುಗರ ಬಳಿಗೆ ಹೋಗದೇನೇ ಸುಮಾರು 1000 ಪುಸ್ತಕಗಳನ್ನು ಮಾರಲಿಕ್ಕೆ ಸಾಧ್ಯವಿದೆ. ಆದರೆ, ಇದು ಎಲ್ಲರಿಗೂ ಸಾಧ್ಯವೆಂದು ಹೇಳುವುದು ಕಷ್ಟ. ಪುಸ್ತಕ ಖರೀದಿಯ ಒಳಹೊರಗನ್ನು ಬಲ್ಲವರಿಗೆ ಪುಸ್ತಕ ಮಾರಾಟ ಸುಲಭ.